# ನಳಿನನಾಭನ ನೀನು ಪಾಡೊ ಬೇಗ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 313.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 331.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Singer has followed these lyrics.

ರಾಗ: ನಾದನಾಮಕ್ರಿಯ ತಾಳ: ಅಟ

ನಳಿನನಾಭನ ನೀನು ಪಾಡೊ ಬೇಗ || ಪ ||
ಒಳ ಕಣ್ಣಿಂದ ಅವನ ಕಂಡು ನಲಿದಾಡೊ || ಅಪ ||

ಹೃದಯ ಆಕಾಶದಲ್ಲಿರುವ, ಅಲ್ಲಿ
ಪದುಮಾಕ್ಷ ಪುರುಷೋತ್ತಮನೆಂಬಾತ
ಆತನು ಬಹುರೂಪದಿಂದ, ಕಾವ
ಆಧಾರವಾಗಿಪ್ಪ, ಸೂಕ್ಷ್ಮ ಪ್ರದೇಶ || 1 ||

ಎಂಟೊಂದು ಕದಗಳ ಮುಚ್ಚೊ, ಮೇಲೆ
ತಂಟೆಯಿಲ್ಲದ ಮನವ ಅವನಲಿ ಇರಿಸೊ
ಕುಂಡಲಿ ಮಧ್ಯದಿ ನೋಡೊ, ದಿವ್ಯ
ಮಂಟಪದಲಿ ಜ್ಯೋತಿ ಥಳ ಥಳಿಸುವುದೊ || 2 ||

ಥಳಥಳಿಸುವ ಬಾಲಕೃಷ್ಣ, ಅಲ್ಲಿ
ಬಲು ಕ್ರೀಡೆಗಳನೆಲ್ಲ ಮಾಡಿಸುವನಯ್ಯ

ಒಳಗೆ ಹೊರಗೆ ಪರಿಪೂರ್ಣ, ನಮ್ಮ
ಪುಲ್ಲಲೋಚನ ತಂದೆ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**೧. ಒಳಗಣ್ಣಿನಿಂದ** - ಅಂತರ್ಮುಖ ಪ್ರವೃತ್ತಿಯಿಂದ; ಯೋಗ ಸಾಧನೆಯಿಂದ ಬರುವ ಅರಿವಿನಿಂದ.

**೨. ಹೃದಯ ಆಕಾಶ** - ಹೃದಯದೊಳಗೆ ಇರುವ ದಹರಾಕಾಶ; ಪರಮಾತ್ಮನ ಸ್ಥಾನ.

**೩. ಎಂಟೊಂದು ಕದ** - ನವದ್ವಾರಗಳು, ದೇಹದ ಒಂಬತ್ತು ಚಿದ್ರಗಳು.

**೪. ತಂಟೆಯಿಲ್ಲದ ಮನ** - ಶುದ್ಧವಾದ ಅಂತಃಕರಣ; ವಾಸನೆಗಳೆಲ್ಲ ಹರಿದು, ಕ್ಲೇಶಗಳನ್ನು ಕಳೆದುಕೊಂಡು ಹರಿ ಪ್ರಾವಣ್ಯವನ್ನು ಪಡೆದುಕೊಂಡು ಮನಸ್ಸು.

**೫. ಕುಂಡಲಿ ಮಧ್ಯದಿ** - ಕುಂಡಲಿನಿಯೋಗದ ಪ್ರಕಾರ ಸಹಸ್ರಾರದಲ್ಲಿ ಪರಮಾತ್ಮನ ನೆಲೆ.

**೬. ಬಲು ಕ್ರೀಡೆಗಳನ್ನೆಲ್ಲ** - ಯೋಗಸಾಧನೆಯಿಂದ ದೊರಕುವ ವಿಭೂತಿಗಳು.

**೭. ಒಳಗೆ ಹೊರಗೆ ಪರಿಪೂರ್ಣ** - 'ಅಂತರ್ಬಹಿಶ್ಚ ತತ್ಸರ್ವಂ' ಎಂಬ ಮಾತಿನ ಛಾಯೆ.

**Classification:** Mundige
**Ankita:** tande purandara vittala
**Location:** NA
**Category:** Bimba Roopa,
**Sub-Category:** Vishnu, kundalini, chakra, divya, hrudaya, akasha, deepa, Krishna, purna,
**Pravachana:** NA
**Explanation:** Dr. Anantha Rao Dandin, Bengaluru